## ಅರ್ಥಪೂರ್ಣ 'ಮಹಾನಾಯಕ'

'ಕನ್ನಡಿಗರ ಹೃದಯ ಗೆದ್ದ ಮಹಾನಾಯಕ' ಲೇಖನ (ಸೆ.3, ಲೇ: ರಾಘವೇಂದ್ರ ತೊಗರ್ಸಿ) ಅರ್ಥಪೂರ್ಣವಾಗಿದೆ. ಜೀ ವಾಹಿನಿಯಲ್ಲಿ ಪ್ರತಿ ಶನಿವಾರ ಮತ್ತು ಭಾನುವಾರ ಪ್ರಸಾರವಾಗುತ್ತಿರುವ 'ಮಹಾನಾಯಕ' ಜನಪ್ರಿಯ ಧಾರಾವಾಹಿ ಎಂಬುದರಲ್ಲಿ ಎರಡು ಮಾತಿಲ್ಲ. ವಾಹಿನಿಗಳು ಇಂತಹ ಮಹಾನಾಯಕರ, ಸಾಧಕರ ಕುರಿತಾದ ಧಾರಾವಾಹಿಗಳನ್ನು ಪ್ರಸಾರ ಮಾಡುವುದರಿಂದ, ಅವರ ಜೀವನ ಚರಿತ್ರೆಯನ್ನು ಹೊಸಪೀಳಿಗೆ ಅರಿತಂತಾಗುತ್ತದೆ.

—ಸು. ವಿಜಯಲಕ್ಷ್ಮಿ, ಶಿವಮೊಗ್ಗ



ಡಾ ಭೀಮರಾವ್ ಅಂಬೇಡ್ಕರ್ ಅವರ ಮನಮಿಡಿಯುವ ಜೀವನಗಾಥೆಯನ್ನು ಧಾರಾವಾಹಿಯ ರೂಪದಲ್ಲಿ ಪ್ರಸಾರ ಮಾಡುತ್ತಿರುವ ಜೀ ಕನ್ನಡ ವಾಹಿನಿ ಕನ್ನಡಿಗರಿಗೆ ಭಾರೀ ಉಡುಗೊರೆ ನೀಡಿದೆ.

—ಬಿ.ಎಸ್. ನಾರಾಯಣಸ್ವಾಮಿ, ಬೋಧನಹೊಸಹಳ್ಳಿ

ನಾನು ತಪ್ಪದೇ ನೋಡುವ ಧಾರಾವಾಹಿ 'ಮಹಾನಾಯಕ'. ಅದರ ಬಗ್ಗೆ ಲೇಖಕರು ಉತ್ತಮ ಮಾಹಿತಿ ನೀಡಿ ನಮ್ಮಂಥ ನಿರಂತರವಾಗಿ ನೋಡುವ ನೋಡುಗರ ಕುತೂಹಲವನ್ನು ತಣಿಸಿದ್ದಾರೆ.

—ಗುಡಿಹಳ್ಳಿ ನಾಗರಾಜ, ಬೆಂಗಳೂರು

ಅಂಬೇಡ್ಕರ್ ಅವರು ತಮ್ಮ ಶ್ರೇಷ್ಠ ವಿದ್ಯಾಭ್ಯಾಸ ಮತ್ತು ನಡವಳಿಕೆಯಲ್ಲಿ ದೇಶದಲ್ಲೇ ಅತ್ಯುತ್ತಮ ಸ್ಥಾನ ಪಡೆದವರು. ಆದರೆ ಅವರಷ್ಟು ಸಾಮಾಜಿಕ ಅಸಮಾನತೆ ಮತ್ತು ಅಸ್ಪೃಶ್ಯತೆಯ ಕರಾಳ ಮುಖವನ್ನು ಅನುಭವಿಸಿದ ವ್ಯಕ್ತಿ ಜಗತ್ತಿನ ಇತಿಹಾಸದಲ್ಲಿ ಹೆಚ್ಚು ಜನ ಇರಲಾರರು. ಜಗತ್ತಿನ ಸಮಾಜ ಸುಧಾರಕರಲ್ಲಿ ಮೊದಲನೇ ಸಾಲಿನಲ್ಲಿ ನಿಲ್ಲುವಂಥವರು ಅವರು. ಅವರು ಪ್ರತಿಪಾದಿಸಿದ ಸ್ತ್ರೀ ಸ್ವಾತಂತ್ರ್ಯ, ಕಾರ್ಮಿಕರ ಕಲ್ಯಾಣ, ಸಣ್ಣ ಸಣ್ಣ ರಾಜ್ಯಗಳ ರಚನೆ, ಹಿಂದೂ ಧರ್ಮದ ಸುಧಾರಣೆ, ಇತ್ಯಾದಿಗಳನ್ನು ಇಂದಿನ ಪೀಳಿಗೆ ಗಮನಿಸಬೇಕು.

—ಪುಂಡಲೀಕ ಸಾದುರೆ, ಬೆಂಗಳೂರು



## ನೀಲಗಿರಿಯೋ ನೀಲಿಯೋ?

'ಕಸ್ತೂರಬಾ v/s ಗಾಂಧಿ' ಧಾರಾವಾಹಿಯ ಸೆ. 3ರ ಸಂಚಿಕೆಯಲ್ಲಿ – 'ಬ್ರಿಟಿಷ್ ಸರ್ಕಾರ ಅಲ್ಲಿನ ರೈತರಿಗೆ, ಗೇಣಿದಾರರಿಗೆ ತಂತಮ್ಮ ಜಮೀನಿನ ಒಂದಿಷ್ಟು ಭಾಗದಲ್ಲಿ 'ನೀಲಗಿರಿ' ಬೆಳೀಲೇಬೇಕು ಅಂತ ಕಡ್ಡಾಯ ಮಾಡ್ತು' ಎನ್ನುವ ವಾಕ್ಯವಿದೆ. ಅದು ನಮ್ಮ ನಾಡಿನ ನೀಲಗಿರಿ ಮರವಲ್ಲ; ನೀಲಿಯ ತಯಾರಿಕೆಗಾಗಿ ಬಳಸುವ ಮರ. ಬಟ್ಟೆಗೆ ಬಳಸುವ ನೀಲಿಯನ್ನು ತಯಾರಿಸುವ ಗಿಡಗಳನ್ನು ಬೆಳೆಯಾಗಿ ಬೆಳೆಯುವಂತೆ ಚಂಪಾರಣ್‌ನಲ್ಲಿನ ರೈತರನ್ನು ನಿರ್ಬಂಧಿಸಲಾಗಿತ್ತು. ನೀಲಿಯ ಬೆಳೆ ತಮ್ಮ ಜಮೀನಿಗೆ ಮಾರಕ ಎಂಬ ಕಾರಣಕ್ಕಾಗಿ ರೈತರು ಅದನ್ನು ವಿರೋಧಿಸುತ್ತಿದ್ದರು. ಕಡ್ಡಾಯವಾಗಿ ನೀಲಿ ಕೃಷಿ ಮಾಡುವ ಸರ್ಕಾರದ ನಿರ್ಧಾರವನ್ನು ವಿರೋಧಿಸಿ, ಗಾಂಧೀಜಿ ಚಳವಳಿ ನಡೆಸಿ ಜನರಿಗೆ ನ್ಯಾಯ ಒದಗಿಸಿಕೊಟ್ಟರು. ಈ ನೀಲಿಯ ಕಥೆ ಧಾರಾವಾಹಿಯಲ್ಲಿ ಸೂಚ್ಯವಾಗಿದೆ. ಬರಗೂರು ರಾಮಚಂದ್ರಪ್ಪ ಅವರ ಕಥನ ಶೈಲಿ ವಿಶೇಷವಾಗಿ ಗೋಚರಿಸುತ್ತಿದೆ. ಅವರಿಗೆ ನಮಸ್ಕಾರಗಳು.

—ಈಶ್ವರ ಶಾಸ್ತ್ರಿ ಶಿರಸಿ

## ಷೇರುಪೇಟೆ: ವಿಂಡೊ ಶಾಪಿಂಗ್

ಘನಶ್ಯಾಮ ಡಿ.ಎಂ. ಅವರ 'ಷೇರುಪೇಟೇಲಿ ವಿಂಡೊ ಶಾಪಿಂಗ್' ಲೇಖನ ಉಪಯುಕ್ತವಾಗಿದೆ. ಕುತೂಹಲದಿಂದ ಓದಿಸಿಕೊಂಡು ಹೋಗುವುದರ ಜೊತೆಗೆ ಸಾಕಷ್ಟು ಮಾಹಿತಿಯನ್ನೂ ಒಳಗೊಂಡಿತ್ತು.

—ಮಧುಸೂಧನ ಬಿ.ಎಸ್.

## ಅಗ್ರ ನಾಯಕ ಧೋನಿ

ಎಮ್.ಎಸ್. ಧೋನಿ ಅವರ ಕುರಿತ ಬರಹ (ಸೆ.3, ಲೇ: ಪ್ರಮೋದ) ಸಮಯೋಚಿತ. ಧೋನಿಯ ಬಗ್ಗೆ ಎಳೆಯರು ತಿಳಿಯದಿರುವ ಅನೇಕ ಅಚ್ಚರಿ ಸಂಗತಿಗಳೂ ಈ ಲೇಖನದಲ್ಲಿ ಅಡಕವಾಗಿವೆ. ಲೇಖಕರ ಆಕರ್ಷಕ ಬರವಣಿಗೆ ಶೈಲಿಯ ಬಗ್ಗೆ ಎರಡು ಮಾತಿಲ್ಲ. ಧೋನಿ ಭಾರತದ ಪರವಾಗಿ ಅಂತಾರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಹಲವಾರು ಅಪೂರ್ವ ದಾಖಲೆಗಳನ್ನು ನಿರ್ಮಿಸಿದ್ದಾರೆ. ಇವುಗಳಲ್ಲಿ ಕೆಲವನ್ನಾದರೂ ಓದುಗರಿಗೆ ಒದಗಿಸಿದ್ದರೆ ಲೇಖನಕ್ಕೆ ಹೆಚ್ಚು ಮೆರುಗು ಬರುತ್ತಿತ್ತು. ಇದೇ ಸಂಚಿಕೆಯಲ್ಲಿ ಪ್ರಕಟವಾಗಿರುವ ಡಾ. ಲಕ್ಷ್ಮಣ್ ಅವರ 'ಪೇರಳೆಗಿದು ಕಾಲ' ಮನಸೂರೆಗೊಂಡಿತು. ಪ್ರಾಥಮಿಕ ಶಾಲೆಯಿಂದಲೂ ಪೇರಳೆ ಹಣ್ಣಿನ ಸವಿಯನ್ನು ಅನುಭವಿಸಿ ಸಂತಸಗೊಂಡಿರುವರಲ್ಲಿ ನಾನೂ ಒಬ್ಬ. ಈ ಹಣ್ಣಿನ ಬಗ್ಗೆ ಲೇಖಕರು ಅನೇಕ ರಸವತ್ತಾದ, ಮೆಲುಕು ಹಾಕುವಂತಹ ಸಂಗತಿಗಳನ್ನು ನೀಡಿದ್ದಾರೆ.

—ಚನ್ನಗಿರಿ ಕೇಶವಮೂರ್ತಿ, ಬೆಂಗಳೂರು

## ಪೇರಳೆ ದಂತೌಷಧವೂ...

ಪೇರಳೆ ಅಥವಾ ಸೀಬೆ ಹಣ್ಣು ಔಷಧೀಯ ಗುಣಗಳನ್ನು ಹೊಂದಿದೆ ಎಂಬ ವಿಷಯ ತಿಳಿದಿತ್ತು. ಆದರೆ ಅದು ಅನೇಕ ರೋಗಗಳಿಗೆ ಔಷಧಿಯಂತೆ ಕಾರ್ಯನಿರ್ವಹಿಸುತ್ತದೆ ಎಂಬ ವಿಷಯ ಲಕ್ಷ್ಮಣ್‌ರ ಪ್ರಬಂಧದಿಂದ ತಿಳಿಯಿತು. ನಮ್ಮ ತಾಯಿ ಹಲ್ಲು ನೋವು ಬಂದಾಗ ಸೀಬೆ ಎಲೆಗಳನ್ನು ನೀರಿಗೆ ಹಾಕಿ ಕುದಿಸಿ, ಆ ನೀರಿನಿಂದ ಬಾಯಿ ಮುಕ್ಕಳಿಸುತ್ತಿದ್ದರು.

—ಕೆ.ಎಸ್. ಸವಿತ, ಬೆಂಗಳೂರು



## ಮುರಿದ ನಿಬ್ಬು

ರವಿರಾಜ ಬೈಕಂಪಾಡಿ ಅವರ ಪತ್ತೆದಾರಿ ಕಥೆ 'ಮುರಿದ ನಿಬ್ಬು' (ಸೆ.3) ಚೆನ್ನಾಗಿತ್ತು. ಪತ್ತೆದಾರಿ ಕಥೆ ಅಂದಾಕ್ಷಣ ನಮ್ಮ ಮನಸ್ಸಿನಲ್ಲಿ ಜೇಮ್ಸ್ ಬಾಂಡ್‌ನ ಡಾಂ ಡೂಂ ಕಥೆಗಳೇ ನೆನಪಾಗುತ್ತವೆ. ಅದಕ್ಕಿಂತ ಭಿನ್ನ ಶೈಲಿಯಲ್ಲಿ ಬರೆಯುವುದು ಮತ್ತು ಈಗಿನ ಬುದ್ಧಿವಂತ ಪೀಳಿಗೆಯವರ ತಲೆಯಲ್ಲಿ ಹುಳ ಬಿಡುವುದು ಕಷ್ಟಸಾಧ್ಯ. ಅದನ್ನು ಈ ಕಥೆ ಸಾಧಿಸಿದೆ.

—ಯೋಗೇಶ್ ಶೆಣೈ, ಮೂಡಬಿದಿರೆ

ಕಥೆ ಬಹಳ ಕುತೂಹಲಕಾರಿಯಾಗಿದೆ. ರವಿರಾಜರ ಒಂದೊಂದು ಕಥೆಯೂ ಬಹಳ ರೋಚಕವಾಗಿರುತ್ತವೆ.

—ನರಸಿಂಹಾರೆಡ್ಡಿ ಯಂಕಮೊಳ, ಸೇಡಂ